ಪ್ರಶ್ನೆ ಪತ್ರಿಕೆ ಕ್ರಮ ಸಂಖ್ಯೆ :
**Q.P. Sl. No. :**

**ಮೇ 2026 ರ ಪರೀಕ್ಷೆ–2**
**MAY 2026 EXAMINATION-2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**A**

**CCE RF/RR/ PF/PR**

**ಸಂಕೇತ ಸಂಖ್ಯೆ : 33-K** **Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ/ ಖಾಸಗಿ ಪುನರಾವರ್ತಿತ ಅಭ್ಯರ್ಥಿ)**
**(Regular Fresh / Regular Repeater / Private Fresh/ Private Repeater)**

ದಿನಾಂಕ : 20. 05. 2026 ] [ Date : 20. 05. 2026
ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-00 ರವರೆಗೆ ] [ Time : 10-00 A.M. to 1-00 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ).*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here/ಇಲ್ಲಿಂದ ಕತ್ತರಿಸಿ
TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಜೊತೆಯಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ
Tear here/ಇಲ್ಲಿಂದ ಕತ್ತರಿಸಿ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **4 × 1 = 4**

1. ಅನುಸ್ವಾರವನ್ನು ಹೊಂದಿದ ಪದ

(ಎ) ಕಾಫೀ

(ಬಿ) ಸಂತೋಷ

(ಸಿ) ತಕರಾರು

(ಡಿ) ವ್ಯಾಪಾರ

2. ಇದು ಆದೇಶ ಸಂಧಿ

(ಎ) ಮಳೆಗಾಲ

(ಬಿ) ಗುರುವನ್ನು

(ಸಿ) ನಿನಗಲ್ಲದೆ

(ಡಿ) ಮಹಾನುಭಾವ

KANNADA

3. 'ಮೂಡಣ' ಎಂಬುದು

(ಎ) ಗುಣವಾಚಕ

(ಬಿ) ಪರಿಮಾಣವಾಚಕ

(ಸಿ) ಪ್ರಕಾರ ವಾಚಕ

(ಡಿ) ದಿಗ್ವಾಚಕ

4. ಸಪ್ತಮಿ ವಿಭಕ್ತಿಯ ಕಾರಕಾರ್ಥ

(ಎ) ಅಧಿಕರಣ

(ಬಿ) ಸಂಬಂಧ

(ಸಿ) ಕರ್ಮಾರ್ಥ

(ಡಿ) ಅಪಾದಾನ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12**

5. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ಈ ನಾಡಿನ ಬೆನ್ನೆಲುಬು ಯಾರು ?

6. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

7. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ ?

8. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?

9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?

10. ಹಾ.ಮಾ. ನಾಯಕರು ಹೇಳುವಂತೆ ರೋಗಿಗಳು ಯಾರ ಬಳಿ ಹೋಗುತ್ತಾರೆ ?

11. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?

12. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ.ಯವರು ಹೇಳಿದ್ದಾರೆ ?

13. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ?

KANNADA

14. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮರು ಹೇಳುತ್ತಾರೆ ?

15. ಬೆಟ್ಟದ ಮೇಲೆ ಮನೆಯ ಮಾಡಿದರೆ ಯಾವುದಕ್ಕೆ ಅಂಜಬಾರದು ?

16. ಧುರಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು ?

18. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ವಿವರಿಸಿ.

19. ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಗೊಂಡಿರುವ ಪ್ರಸಂಗಗಳನ್ನು ತಿಳಿಸಿ.

20. ಸೌಜನ್ಯದ ವರ್ತನೆಯ ಗುರುತುಗಳು ಯಾವುದು ?

21. ಕೆರೆಯಲ್ಲಿ ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ ?

KANNADA

22. ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ ?

23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ರೀತಿಯನ್ನು ವಿವರಿಸಿ.

24. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ವಿವರಿಸಿ.

**IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

25. ಬಸವರಾಜ ಸಾದರ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

26. ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ,
ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು;
ಸಿಡುಕು ಮಿಡುಕನು ತೊರೆದು ಮೌನಿಯಾಗು !

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

27. "ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿದೆ."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** **1 × 3 = 3**

28. ಶಕ್ತಿಗಿಂತ ಯುಕ್ತಿ ಮೇಲು

**ಅಥವಾ**

ಹಾಸಿಗೆ ಇದ್ದಷ್ಟು ಕಾಲು ಚಾಚು

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** **5 × 3 = 15**

29. "ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು."

30. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ."

31. "ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ."

KANNADA

32. "ಅಮ್ಮನ ಮಾತು ಸುಳ್ಳಾಗದು"

33. "ಶಿವಶಿವ ಕಾದಿಗೆಲಿದೆವು"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

34. ಏಕಾಂಗಿ ವೀರನಂತೆ ..........................................

..................................................................

..................................................................

............................................ ಕತ್ತಲಲ್ಲಿ ನಡೆದನು

**ಅಥವಾ**

ಕಾಡು ಕಾಡು ಅಲೆದ ..........................................

..................................................................

..................................................................

.................................. ಮಹಾಬೆಳಕೊಂದು ಕಂಡಿತು

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.

**ಅಥವಾ**

ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

KANNADA

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

36. ರಾಜರ್ಷಿಗಳು, ನಿಸರ್ಗ ಪ್ರಿಯರೂ ಆದ ನಾಲ್ವಡಿ ಕೃಷ್ಣರಾಜ ಒಡೆಯರು ಸಹ್ಯಾದ್ರಿಯ ಸೊಬಗನ್ನು ಕಂಡು ತಮ್ಮ ಬೇಸಿಗೆ ನಿವಾಸವನ್ನು ಕೆಮ್ಮಣ್ಣುಗುಂಡಿಯಲ್ಲಿ ಕಟ್ಟಿಸಿದರು. ಇದನ್ನು ಬೇಸಿಗೆ ಗಿರಿಧಾಮವೆಂದು ಕರೆಯುತ್ತಾರೆ. ಬೆಟ್ಟದ ಮಡಿಲಲ್ಲಿರುವ ದೊಡ್ಡಬ್ಬೆ ಜಲಪಾತದ ನೀರು ನಲ್ಲಿಗಳ ಮೂಲಕ ಗಿರಿಧಾಮದ ನಿವಾಸಿಗಳಿಗೆ ಹಾಗೂ ತೋಟಕ್ಕೆ ಬರುತ್ತದೆ. ಈ ನೀರು ಬೆಟ್ಟದಲ್ಲಿರುವ ವನಸ್ಪತಿಗಳ ಮಧ್ಯದಲ್ಲಿ ಹಾಯ್ದು ಬರುತ್ತದೆ ಹಾಗೂ ಬೆಟ್ಟವು ಲೋಹಾಂಶದಿಂದ ಕೂಡಿದೆ. ಅದರಿಂದಾಗಿ ಈ ನೀರು ಲೋಹಾಂಶ ಮತ್ತು ವನಸ್ಪತಿಗಳ ಅಂಶದಿಂದ ಕೂಡಿರುವುದರಿಂದ ಆರೋಗ್ಯ ವರ್ಧನೆಗೆ ಸಹಕಾರಿಯಾಗಿದೆ.

ಕೆಮ್ಮಣ್ಣುಗುಂಡಿಯ ಪರ್ವತಗಳು ಬಿಸಿಲಿಗೆ ಒಣಗದೆ, ಚಳಿಗೆ ಕುಗ್ಗದೆ, ಮಳೆಗೆ ಅಂಜದೆ ಸದಾ ಹಸಿರುಡುಗೆಯನ್ನುಟ್ಟು ನಿಂತಿರುವ ಸಹ್ಯಾದ್ರಿ ಪರ್ವತಗಳು ಸೊಬಗಿನ ತವನಿಧಿಯಾಗಿವೆ. ಗಿರಿಧಾಮಗಳಲ್ಲಿ ವಿದ್ಯುತ್, ಹಾಸಿಗೆ-ಹೊದಿಕೆ, ಅಡಿಗೆ-ಊಟಗಳಿಗೆ ಬೇಕಾಗುವ ಸಾಮಾಗ್ರಿಗಳ ಸೌಲಭ್ಯವೂ ಇದೆ. ಈ ಗಿರಿಧಾಮಗಳಲ್ಲಿ ತಂಗುವುದರಿಂದ

ಮನದ ಜಾಡ್ಯವಳಿದು ಹೊಸ ಚೈತನ್ಯ ಹೊರಹೊಮ್ಮುವುದು. ಮನಸ್ಸಿಗೆ ಶಾಂತಿ, ದೇಹಕ್ಕೆ ಸೌಖ್ಯ, ಆತ್ಮಕ್ಕೆ ತೃಪ್ತಿತರುತ್ತದೆ. ಅಲ್ಲದೇ ಮಾನವನ ಅಂತರಂಗದ ವಿಕಾಸವಾಗುವುದರೊಂದಿಗೆ ಆತ್ಮಸಂತೋಷವು ದೊರೆಯುತ್ತದೆ. ಇವು ಗಿರಿಧಾಮಗಳಿಂದ ಆಗುವ ಪ್ರಯೋಜನಗಳಾಗಿವೆ. ಗಿರಿಧಾಮಗಳಲ್ಲಿ ಕುಳಿತು ಬೆಟ್ಟಗಳನ್ನು ನೋಡುತ್ತಿದ್ದರೆ ಅಲ್ಲಿ ಕಾಣುವ ಸೊಬಗಿನ ಎದುರು ರಾಜವೈಭವ ತೃಣ ಸಮಾನವೆನಿಸುವುದು.

**ಪ್ರಶ್ನೆಗಳು :**

ಅ) ಗಿರಿಧಾಮಗಳಲ್ಲಿ ತಂಗುವುದರಿಂದ ಆಗುವ ಪ್ರಯೋಜನಗಳಾವುವು ?

ಆ) ದೊಡ್ಡಬ್ಬೆ ಜಲಪಾತದ ನೀರು ಆರೋಗ್ಯವರ್ಧನೆಗೆ ಹೇಗೆ ಸಹಕಾರಿಯಾಗಿದೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

37. ದಿನಪತ್ರಿಕೆಗಳ ಮಹತ್ವ

**ಅಥವಾ**

ಅರಣ್ಯ ಸಂರಕ್ಷಣೆಯ ಅಗತ್ಯತೆ

KANNADA

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

38. ನಿಮ್ಮನ್ನು ಬಾಗಲಕೋಟೆಯ ವಿವೇಕನಗರದ ನಿವಾಸಿ 'ಮಹೇಶ' ಎಂದು ಭಾವಿಸಿಕೊಂಡು, ನೀವು ವಾಸಿಸುವ ಪ್ರದೇಶದಲ್ಲಿ 'ಪ್ರಾಥಮಿಕ ಆರೋಗ್ಯ ಕೇಂದ್ರ' ತೆರೆಯುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬಸವಕಲ್ಯಾಣ ನಿವಾಸಿ 'ಸಂಗೀತಾ' ಎಂದು ಭಾವಿಸಿಕೊಂಡು, ನಿಮ್ಮೂರ ಜಾತ್ರೆಗೆ ಬರುವಂತೆ ಕೋರಿ ಬೀದರಿನ ಶರಣನಗರದಲ್ಲಿ ವಾಸವಾಗಿರುವ 'ಕಲ್ಪನಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

DO NOT WRITE ANYTHING HERE